**ಪಿ.ಡಬ್ಲೂ-01**

**ಸಾಕ್ಷಿಯನ್ನು ದಿನಾಂಕಃ 17.09.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರ ಶ್ರೀ. ಬಿ.ಎಂ.ಆರ್. ವಕೀಲರಿಂದಃ**

ದಿನಾಂಕಃ 27.09.2007ರ ಅಡಮಾನ ಪತ್ರದ ಧೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-5 ಎಂದು ಗುರುತಿಸಲಾಯಿತು.

ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-6 ಎಂದು ಗುರುತಿಸಲಾಯಿತು.

ಉಪ-ನೋಂದಣಾಧಿಕಾರಿಗಳ ಡಿಜಿಟಲ್ ಸಹಿಯಿರುವ ದಿನಾಂಕಃ 13.03.2012ರ ಹಕ್ಕು-ಖುಲಾಸೆ ಪತ್ರದ ಧೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-7 ಎಂದು ಗುರುತಿಸಲಾಯಿತು.

03 ಪುಟಗಳುಳ್ಳ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-8 ಎಂದು ಗುರುತಿಸಲಾಯಿತು.

01 ಗಣಕೀಕೃತ ಪಹಣಿ ಪತ್ರಿಕೆಯನ್ನು ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-9 ಎಂದು ಗುರುತಿಸಲಾಯಿತು.

ದಿನಾಂಕಃ 25.07.1996ರ ಉಪ-ವಿಭಾಗಾಧಿಕಾರಿಗಳ ಆದೇಶದ ಧೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-10 ಎಂದು ಗುರುತಿಸಲಾಯಿತು.

ದಿನಾಂಕಃ 06.07.1996ರ ನಿರಾಪೇಕ್ಷಣಾ ಪತ್ರದ ಧೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-11 ಎಂದು ಗುರುತಿಸಲಾಯಿತು.

ಅನುಮೋದಿತ ನಕ್ಷೆಯ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-12 ಎಂದು ಗುರುತಿಸಲಾಯಿತು.

ಕಂದಾಯ ಪಾವತಿ ರಸೀದಿಯ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.–13 ಎಂದು ಗುರುತಿಸಲಾಯಿತು.

ಡಿಮ್ಯಾಂಡ್ ಮತ್ತು ಅಸೆಸ್ ಮೆಂಟ್ ರಿಜಿಸ್ಟರ್ ಎಕ್ಸಟ್ರಾಕ್ಟ್ ನ ಪ್ರತಿಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.–14 ಮತ್ತು ನಿ.ಪಿ.–15 ಎಂದು ಗುರುತಿಸಲಾಯಿತು.

ಆಸ್ತಿ ಸಂಖ್ಯೆ: 154 ರ ಕಂದಾಯ ಪಾವತಿ ರಸೀದಿಯ ಪ್ರತಿ, ಡಿಮ್ಯಾಂಡ್ ಮತ್ತು ಅಸೆಸ್ ಮೆಂಟ್ ರಿಜಿಸ್ಟರ್ ಎಕ್ಸಟ್ರಾಕ್ಟ್ ನ ಪ್ರತಿಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.–16 ರಿಂದ ನಿ.ಪಿ.–18 ಎಂದು ಗುರುತಿಸಲಾಯಿತು.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರುರವರು ಬೆಂಗಳೂರಿನ ಸಾಲ ವಸೂಲಾತಿ ನ್ಯಾಯಾಧಿಕರಣದಲ್ಲಿ ಒ.ಎಸ್. 24/2013 ರಂತೆ ದಾವೆ ಸಲ್ಲಿಸಿದ್ದು, ಸದರಿ ದಾವೆಯ ಆದೇಶ ಪುಟದ ಧೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.–19 ಎಂದು ಗುರುತಿಸಲಾಯಿತು.

ಬೆಂಗಳೂರಿನ ಸಾಲ ವಸೂಲಾತಿ ನ್ಯಾಯಾಧಿಕರಣದಲ್ಲಿ ಹಾಜರುಪಡಿಸಿದ್ದ 63 ಪುಟಗಳುಳ್ಳ ಧೃಡೀಕೃತ ಪ್ರತಿಯ ದಾಖಲೆಗಳನ್ನು ಸ್ಪೈರಲ್ ಬೈಡಿಂಗ್ ಮಾಡಿಸಿ ಹಾಜರುಪಡಿಸಿದ್ದೇನೆ. ಅದನ್ನು ಒಟ್ಟಾಗಿ ನಿ.ಪಿ.–20 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಜಿ.ವಿ.ಎಸ್. ವಕೀಲರಿಂದಃ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**